ದಿಃ 11.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. Index of Land ದೃಢೀಕೃತ ನಕಲು ನಿ.ಪಿ.1 ಎಂದು ಗುರುತಿಸಲಾಯಿತು, Records of Right ದೃಢೀಕೃತ ನಕಲು ನಿ.ಪಿ.2 ಎಂದು ಗುರುತಿಸಲಾಯಿತು, ನಕ್ಷೆ ದೃಢೀಕೃತ ನಕಲು ನಿ.ಪಿ.3 ಎಂದು ಗುರುತಿಸಲಾಯಿತು, ಆಕಾರಬಂದುವಿನ ದೃಢೀಕೃತ ನಕಲು ನಿ.ಪಿ.4 ಎಂದು ಗುರುತಿಸಲಾಯಿತು, ಎಂ.ಆರ್. ನ ಪ್ರತಿ ನಿ.ಪಿ.5 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 129/9 ರ ಪಹಣಿ ಪತ್ರ ನಿ.ಪಿ.6 ಎಂದು ಗುರುತಿಸಲಾಯಿತು, ಬೆಳೆ ಫಸಲು ದೃಢೀಕರಣ ಪತ್ರ ನಿ.ಪಿ.7 ಎಂದು ಗುರುತಿಸಲಾಯಿತು, ಕಂದಾಯ ರಸೀದಿ ನಿ.ಪಿ.8 ಎಂದು ಗುರುತಿಸಲಾಯಿತು, ಭೂ ಮಾಪಕರು ಸಲ್ಲಿಸಿರುವ ನಿವೇದನೆ ದೃಢೀಕೃತ ನಕಲು ನಿ.ಪಿ.9 ಎಂದು ಗುರುತಿಸಲಾಯಿತು, ಎಂ.ಕೆ. ರುದ್ರೇಶ್ ರವರ ಹೇಳಿಕೆ ನಿ.ಪಿ.10 ಎಂದು ಗುರುತಿಸಲಾಯಿತು, ರೀ ಸರ್ವೆ ನಂಬರ್ 129/9 ರ ಹದ್ದು ಬಸ್ತು ಅಳತೆ ನಕ್ಷೆಯ ದೃಢೀಕೃತ ನಕಲು ನಿ.ಪಿ.11 ಎಂದು ಗುರುತಿಸಲಾಯಿತು, ನೋಟೀಸು ನಿ.ಪಿ.12 ಎಂದು ಗುರುತಿಸಲಾಯಿತು, ಪ್ರತಿವಾದಿಯು ಸಲ್ಲಿಸಿರುವ ಕೇವಿಯಟ್ ನಿ.ಪಿ.13 ಮತ್ತು 14 ಎಂದು ಗುರುತಿಸಲಾಯಿತು, 2 ಅಂಚೆ ಲಕೋಟೆ ನಿ.ಪಿ.15 ಮತ್ತು 16 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೇಳಿದ್ದು, ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ದಿಃ 26.05.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಶ್ರೀ ಎಂ.ವಿ.ಜೆ. ವಕೀಲರಿಂದ ಪ್ರತಿವಾದಿ ಪರವಾಗಿ**

3. ನನ್ನ ಅಜ್ಜನ ಹೆಸರು ಈರೇಗೌಡ ಆಗಿರುತ್ತದೆ. ಪ್ರತಿವಾದಿಯ ಅಜ್ಜನ ಹೆಸರು ಸಿದ್ದೇಗೌಡ. ನನ್ನ ಅಜ್ಜ ಮತ್ತು ಪ್ರತಿವಾದಿಯ ಅಜ್ಜ ಅಣ್ಣ ತಮ್ಮಂದಿರು ಆಗಿರುತ್ತಾರೆ. ನನ್ನ ಅಜ್ಜ ಹಿರಿಯವರಾಗಿದ್ದು ಪ್ರತಿವಾದಿಯ ಅಜ್ಜ ಕಿರಿಯವರಾಗಿರುತ್ತಾರೆ. ಕೃಷ್ಣೇಗೌಡರು ಪ್ರತಿವಾದಿಯ ತಂದೆಯ ಅಣ್ಣನಾಗಿರುತ್ತಾರೆ. ಎಂ.ಎಸ್. ಈರೇಗೌಡರು ರಾಮೇಗೌಡರ ಅಣ್ಣನಾಗಿರುತ್ತಾರೆ. ಬೈರೇಗೌಡರು ರಾಮೇಗೌಡರ ತಂದೆಯ ಅಣ್ಣನಾಗಿರುತ್ತಾರೆ. ಮೇಲೆ ಹೇಳಿದ ಎಲ್ಲ ವ್ಯಕ್ತಿಗಳು ಒಟ್ಟು ಕುಟುಂಬದವರಾಗಿರುತ್ತಾರೆ ಎಂದರೆ ಸರಿ. ಈರೇಗೌಡರ ಮಗನ ಹೆಸರು ಕರಿಗೌಡ ಎಂದರೆ ಸರಿ. ಈರೇಗೌಡರಿಗೆ ಒಟ್ಟು 3 ಜನ ಮಕ್ಕಳಿದ್ದು ಎಂ.ಇ. ಕರಿಗೌಡ, ಎಂ.ಇ. ಈರೇಗೌಡ ಮತ್ತು ಎಂ.ಇ. ಕೆಂಚೇಗೌಡ. ನಾನು ಕರಿಗೌಡರ ಮಗ ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಗಳನ್ನು ನಮ್ಮ ಅಜ್ಜಂದಿರೇ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗವು ನೊಂದಾಯಿತ ವಿಭಾಗ ಎಂದರೆ ಸರಿ. ಸದರಿ ನೊಂದಾಯಿತ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಅಭ್ಯಂತರ ಇಲ್ಲ. ಸಾಕ್ಷಿಯು ಮುಂದುವರೆದು ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಅಜ್ಜಂದಿರ ಕಾಲದಲ್ಲಿಯೇ ಅವರ ಅಣ್ಣ ತಮ್ಮಂದಿರು ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜ ಈರೇಗೌಡರು ಸರ್ವೆ ನಂಬರ್ 129/1 ರಲ್ಲಿ ಇರುವ ಮನೆಯಲ್ಲಿ ವಾಸವಾಗಿದ್ದರು. ಸರ್ವೆ ನಂಬರ್ 129/1 ರಲ್ಲಿ ಇರುವ ಮನೆಗೆ ಸಂಬಂಧಪಟ್ಟ ದಾಖಲೆಯನ್ನು ಸಂಬಂಧಪಟ್ಟ ಇಲಾಖೆಯಿಂದ

ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ಎಂ.ಎಂ. ಲಕ್ಷ್ಮಣಗೌಡರು ನನ್ನ ದೊಡ್ಡ ಅಜ್ಜ ಬೈರೇಗೌಡರ ಮಗನಾದ ಮೆಣಸೇಗೌಡರ ಮಗನಾಗಿರುತ್ತಾರೆ. ಪ್ರತಿವಾದಿಳು ಮತ್ತು ನಾನು ಹಾಗೂ ಲಕ್ಷ್ಮಣಗೌಡರು ರಕ್ತ ಸಂಬಂಧಿಗಳು ಎಂದರೆ ಸರಿ. ಲಕ್ಷ್ಮಣಗೌಡರು ಮೊದಲಿಗೆ ಸರ್ವೆ ನಂಬರ್ 129/9 ರಲ್ಲಿ ವಾಸವಾಗಿದ್ದರು ಈಗ ಲಕ್ಷ್ಮಣಗೌಡರು ಮಗಲುಮಕ್ಕಿಯಲ್ಲಿ ಸರ್ವೆ ನಂಬರ್ 137 ರಲ್ಲಿ ವಾಸವಾಗಿರುತ್ತಾರೆ. ಸರ್ವೆ ನಂಬರ್ 129/9 ರಲ್ಲಿ ಲಕ್ಷ್ಮಣಗೌಡರು ಮತ್ತು ಪ್ರತಿವಾದಿಯು ಅಕ್ಕ ಪಕ್ಕದ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸರ್ವೆ ನಂಬರ್ 129/9 ರಲ್ಲಿ ಲಕ್ಷ್ಮಣಗೌಡರು ವಾಸವಾಗಿದ್ದ ಮನೆಯನ್ನು ಬೆಂಗಳೂರಿನ ವಿಷ್ಣು ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಲಕ್ಷ್ಮಣಗೌಡರು ಸರ್ವೆ ನಂಬರ್ 129/4, ಸರ್ವೆ ನಂಬರ್ 129/3 ಆಸ್ತಿಯನ್ನು ಬೆಂಗಳೂರಿನ ವಿಷ್ಣು ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 129/9 ರಲ್ಲಿ ಎಂ.ಎಂ. ಲಕ್ಷ್ಮಣಗೌಡರಿಗೆ 5 ½ ಗುಂಟೆ ಆಸ್ತಿ ಇತ್ತು ಎಂದರೆ ಸಾಕ್ಷಿಯು ಆಸ್ತಿ ಇತ್ತು ಆದರೆ ಸದರಿ ಆಸ್ತಿಯನ್ನು ನನಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 129/1 ರ ಎಂ.ಎಂ. ಲಕ್ಷ್ಮಣಗೌಡರ 5 ½ ಗುಂಟೆ ಆಸ್ತಿ ಪಹಣಿ, ಎಂ.ಆರ್., ಪಟ್ಟಾ ಪುಸ್ತಕ, ಕಂದಾಯ ರಸೀದಿ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ.

4. ಎಂ.ಎಂ. ಲಕ್ಷ್ಮಣಗೌಡರು ವಾಸವಾಗಿದ್ದ 129/9 ರಲ್ಲಿ ಇದ್ದ ಮನೆಯು ಈಗ ಅಸ್ಥಿತ್ವದಲ್ಲಿ ಇರುವುದಿಲ್ಲ. ಸದರಿ ಮನೆಯು ಬಿದ್ದು ಹೋಗಿರುತ್ತದೆ. ಯಾವ ಇಸವಿಯಲ್ಲಿ ಸದರಿ ಮನೆಯು ಬಿದ್ದು ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 129 ರಲ್ಲಿ 5 ½ ಗುಂಟೆ ಆಸ್ತಿಯನ್ನು ಎಂ.ಎಂ.

ಲಕ್ಷ್ಮಣಗೌಡರು ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 129/9 ಕ್ಕೆ ಸಂಬಂಧಿಸಿದಂತೆ ಎಂ.ಎಂ. ಲಕ್ಷ್ಮಣಗೌಡರು ಪ್ರತಿವಾದಿಗಳ ವಿರುದ್ದ ಜಯಕುಮಾರ್ ಹಾಗೂ ಶೇಷಮ್ಮ ಮತ್ತು ತಹಶೀಲ್ದಾರ್ ಹಾಗೂ ಇತರರ ವಿರುದ್ದ ಚಿಕ್ಕಮಗಳೂರಿನ ಡಿ.ಡಿ.ಎಲ್.ಆರ್. ಕಚೇರಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಹಾಜರಾಗಿರುತ್ತೇನೆ. ಸರ್ವೆ ನಂಬರ್ 129/1 ರಿಂದ 129/13 ರ ಪೋಡುಗಳನ್ನು ರದ್ದು ಮಾಡಬೇಕು ಎಂದು ಎಂ.ಎಂ. ಲಕ್ಷ್ಮಣಗೌಡರು ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ಪ್ರಕಾರ ಹೊಸದಾಗಿ ಸರ್ವೆ ಆಗಬೇಕು ಎಂದು ಆದೇಶ ಆಗಿ ನನಗೆ ಸರ್ವೆಯರ್ ನೋಟೀಸು ನೀಡಿರುತ್ತಾರೆ ಎಂದರೆ ಸಾಕ್ಷಿಯು ನೋಟೀಸು ನೀಡಿರುತ್ತಾರೆ, ಆದರೆ ಸರ್ವೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಯಂತೆ 3-4 ಬಾರಿ ಸರ್ವೆಯರ್ ಸ್ಥಳಕ್ಕೆ ಬಂದಿದ್ದರು ಸಹ ಈ ಪ್ರಕರಣವನ್ನು ಆಧಾರ ಮಾಡಿಕೊಂಡು ಸರ್ವೆ ಮಾಡಲು ನಾನು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 129/1 ರಿಂದ ಸರ್ವೆ ನಂಬರ್ 129/13 ನ್ನು ಅಳತೆ ಮಾಡುವುದಕ್ಕೆ ನನ್ನದು ಯಾವುದೇ ತಂಟೆ ತಕರಾರು ಇರುವುದಿಲ್ಲ. ಸರ್ವೆ ಮಾಡಲು ನನ್ನ ಸಂಪೂರ್ಣ ಒಪ್ಪಿಗೆ ಇರುತ್ತದೆ.

5. ದಿಃ 18.09.2021 ರಂದು ಉದಯ್ ಡಿ.ಪಿ., ಭೂಮಾಪಕರು, ಮೂಡಿಗೆರೆ ರವರು ಸರ್ವೆ ನಂಬರ್ 129/9 ನ್ನು ಅಳತೆ ಮಾಡಿರುತ್ತಾರೆ ಎಂದರೆ ಸರಿ. ಅಳತೆ ಮಾಡುವ ಪೂರ್ವದಲ್ಲಿ ಸದರಿ ಭೂಮಾಪಕರು ನನಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 129/9 ನ್ನು ಅಳತೆ ಮಾಡುವ ಸಮಯದಲ್ಲಿ ನಾನು ಸ್ಥಳದಲ್ಲಿ ಇದ್ದೆನು. ಭೂಮಾಪಕರು ಸ್ಥಳದಲ್ಲಿ ಮಾಡಿರುವ ಮಹಜರ್ ಗೆ ನಾನು ರುಜು ಮಾಡಿರುತ್ತೇನೆ. ಉದಯ್ ಡಿ.ಪಿ., ಭೂಮಾಪಕರು, ಸರ್ವೆ ಪ್ರಕಾರ ನಕ್ಷೆಯನ್ನು ತಯಾರು ಮಾಡಿರುತ್ತಾರೆ ಎಂದರೆ

ಸರಿಯಲ್ಲ. ಉದಯ್ ಡಿ.ಪಿ., ಭೂಮಾಪಕರು ಮಾಡಿರುವ ಸರ್ವೆ ನಂಬರ್ 129/9 ರ ಸರ್ವೆ ನಕ್ಷೆಯನ್ನು ನಾನು ಪಡೆದುಕೊಂಡಿರುತ್ತೇನೆ. ಸದರಿ ಸರ್ವೆ ನಕ್ಷೆಯು ನನ್ನ ಬಳಿ ಇರುತ್ತದೆ. 2021 ರಲ್ಲಿ ಎಂ.ಎಂ. ಲಕ್ಷ್ಮಣಗೌಡರು 5 ½ ಗುಂಟೆ ಜಮೀನನ್ನು ಸರ್ವೆ ನಂಬರ್ 129/9 ರಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ಸರ್ವೆ ಸ್ಕೆಚ್ ಮತ್ತು ವರದಿಯಲ್ಲಿ ತಿಳಿಸಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಒತ್ತುವರಿಯನ್ನು ಎಂ.ಎಂ. ಲಕ್ಷ್ಮಣಗೌಡರು ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಎಂ.ಎಂ. ಲಕ್ಷ್ಮಣಗೌಡರು ಸದರಿ ಒತ್ತುವರಿಯನ್ನು ಬಿಟ್ಟುಕೊಟ್ಟ ಬಗ್ಗೆ ಯಾವುದೇ ಕರಾರು ಪತ್ರ ಮಾಡಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 27.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎಂ.ವಿ.ಜೆ. ವಕೀಲರಿಂದ ಪ್ರತಿವಾದಿ ಪರವಾಗಿ**

6. ದಾವ ಎ ಶೆಡ್ಯೂಲ್ ಆಸ್ತಿಯ ಗಡಿ ಗುರುತಿನಲ್ಲಿ ಯಾರ ಆಸ್ತಿ ಇರುತ್ತದೆ ಎನ್ನುವ ಬಗ್ಗೆ ಅವರ ಹೆಸರುಗಳನ್ನು ನಮೂದು ಮಾಡಿಸಿರುತ್ತೇನೆ. ದಾವ ಬಿ ಶೆಡ್ಯೂಲ್ ಆಸ್ತಿಯ ಗಡಿ ಗುರುತಿನಲ್ಲಿಯು ಯಾರ ಹೆಸರಿನ ಆಸ್ತಿಗಳು ಇರುತ್ತದೆ ಎಂದು ನಾನು ನಮೂದು ಮಾಡಿರುತ್ತೇನೆ. ನಾನು ವಾದ ಪತ್ರದ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳ ಗಡಿ ಗುರುತಿನಲ್ಲಿ ಇರುವ ಆಸ್ತಿಗಳು ಯಾರ ಹೆಸರಿನಲ್ಲಿ ಇರುತ್ತದೆ ಎನ್ನುವ ಬಗ್ಗೆ ನಮೂದು ಮಾಡದೇ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಯ 4 ದಿಕ್ಕಿನಲ್ಲಿಯು ಯಾರ ಆಸ್ತಿ ಇರುತ್ತದೆ ಎಂದು ನನಗೆ ಇಂದಿಗೂ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯನ್ನು ಸರ್ವೆ ಮಾಡುವ ಸಮಯದಲ್ಲಿ ಬಾಜುದಾರರಿಗೆ ನೋಟೀಸು ನೀಡಿದ ಬಗ್ಗೆ ನಾನು ದಾಖಲಾತಿಯನ್ನು ಪಡೆದುಕೊಂಡಿರುತ್ತೇನೆ. ಸರ್ವೆಯರ್ ರವರು ನೀಡಿರುವ ನೋಟೀಸಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಹದ್ದು ಬಸ್ತು ಸರ್ವೆಯ ವಿರುದ್ದ ಎಂ.ಎಂ. ಲಕ್ಷ್ಮಣಗೌಡರು ಮೇಲ್ಮನವಿ ಹೋಗಿರುತ್ತಾರೆ ಎಂದರೆ ಸಾಕ್ಷಿಯು ದಾವ ಆಸ್ತಿಯ ಹದ್ದು ಬಸ್ತಿನ ಸಂಬಂಧವಾಗಿ ಎಂ.ಎಂ. ಲಕ್ಷ್ಮಣಗೌಡರು ಮೇಲ್ಮನವಿ ಹಾಕಿರುವುದಿಲ್ಲ ಅವರ ಆಸ್ತಿಗೆ ಸಂಬಂಧಪಟ್ಟ ಸರ್ವೆಯ ಬಗ್ಗೆ ಮೇಲ್ಮನವಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ದಾವ ಸರ್ವೆ ನಂಬರ್ 129/9 ರ ಬಾಬ್ತು ಎಂ.ಎಂ. ಲಕ್ಷ್ಮಣಗೌಡರು ಮೇಲ್ಮನವಿ ಹೋಗಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯು ಇನ್ನು ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿ. ನಾನು ಸದರಿ ಮೇಲ್ಮನವಿಯಲ್ಲಿ ಹಾಜರಾಗಿರುತ್ತೇನೆ ಎಂದರೆ ಸರಿ.

ಎಂ.ಎಂ. ಲಕ್ಷ್ಮಣಗೌಡರು ಮೇಲ್ಮನವಿಯಲ್ಲಿ ಏನು ಹೇಳಿರುತ್ತಾರೆ ಎನ್ನುವ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸಾಕ್ಷಿಯು ಮುಂದುವರೆದು ಎಂ.ಎಂ. ಲಕ್ಷ್ಮಣಗೌಡರು ಸಲ್ಲಿಸಿರುವ ಮೇಲ್ಮನವಿಯಲ್ಲಿ ನಾನು ಹಾಜರಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಡಿ.ಡಿ.ಎಲ್.ಆರ್. ಕಚೇರಿಯಿಂದ ಎಂ.ಎಂ. ಲಕ್ಷ್ಮಣಗೌಡರು ಸಲ್ಲಿಸಿರುವ ಮೇಲ್ಮನವಿಯಲ್ಲಿ ನನಗೆ ನೋಟೀಸು ಬಂದಿರುತ್ತದೆ ಎಂದರೆ ಸರಿ. ಸದರಿ ನೋಟೀಸನ್ನು ನಾನು ಈ ಪ್ರಕರಣದಲ್ಲಿ ಹಾಜರು ಮಾಡಿರುವುದಿಲ್ಲ. ಯಾವುದೇ ಪ್ರಕರಣಗಳಲ್ಲಿ ನೋಟೀಸು ಬಂದರೆ ಸದರಿ ಪ್ರಕರಣದಲ್ಲಿ ಹಾಜರಾಗಿ ತನ್ನ ಅಭಿಪ್ರಾಯವನ್ನು ಸದರಿ ಪ್ರಕರಣದಲ್ಲಿ ಹೇಳಬೇಕಾಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 129 ರಲ್ಲಿ ಅನೇಕ ಜನ ಹಿಡುವಳಿದಾರರು ಇರುತ್ತಾರೆ ಎಂದರೆ ಸರಿ. ದಾರದಹಳ್ಳಿ ಗ್ರಾಮದ ಸರ್ವೆ ನಂಬರ್ 129 ರಲ್ಲಿ ಒಟ್ಟು 11 ಜನ ಹಿಡುವಳಿದಾರರು ಇರುತ್ತಾರೆ. 11 ಕ್ಕಿಂತಲು ಹೆಚ್ಚು ಜನ ಹಿಡುವಳಿದಾರರು ಇರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿದ್ದರು ಸಹ ಅದನ್ನು ಒಪ್ಪಿಕೊಂಡರೆ ನನಗೆ ಈ ಪ್ರಕರಣದಲ್ಲಿ ತೊಂದರೆಯಾಗುತ್ತದೆ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾರದಹಳ್ಳಿ ಗ್ರಾಮದ ಸರ್ವೆ ನಂಬರ್ 129 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.4 ದಾಖಲಾತಿಯಲ್ಲಿ ದಾರದಹಳ್ಳಿ ಗ್ರಾಮದ ಸರ್ವೆ ನಂಬರ್ 129 ರಲ್ಲಿ ಒಟ್ಟು 14 ಜನ ಹಿಡುವಳಿದಾರರು ಇರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿ.ಪಿ.4 ರಲ್ಲಿ ನನಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.3 ನಕ್ಷೆಯಲ್ಲಿ ಎಲ್ಲಿಯು ಒತ್ತುವರಿಯನ್ನು ತೋರಿಸಿರುವುದಿಲ್ಲ ಎಂದರೆ ಸರಿ.

7. ದಾರದಹಳ್ಳಿ ಗ್ರಾಮದ ಸರ್ವೆ ನಂಬರ್ 129/9 ರಲ್ಲಿ ನನಗೆ ಇರುವ ಒಟ್ಟು 18 ಗುಂಟೆ ಜಮೀನಿನಲ್ಲಿ 16 ½ ಗುಂಟೆ ಜಮೀನನ್ನು ಬೇರೆಯವರು ಒತ್ತುವರಿ ಮಾಡಿರುತ್ತಾರೆ ಎಂದು ನಾನು ವಾದ ಪತ್ರದಲ್ಲಿ ಹೇಳಿರುತ್ತೇನೆ. ನನಗೆ ಸೇರಿದ 16 ½ ಗುಂಟೆ ಜಮೀನನ್ನು ಯಾರು ಒತ್ತುವರಿ ಮಾಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಒತ್ತುವರಿ ಮಾಡಿರುವ ಜಮೀನಿಗೆ ಒತ್ತುವರಿದಾರರು ಬೇಲಿ ನಿರ್ಮಿಸಿರುತ್ತಾರೆ. ಬೇಲಿ ನಿರ್ಮಾಣ ಮಾಡುವ ಸಮಯದಲ್ಲಿ ನಾನು ಬೆಳೆಸಿರುವ ಗಿಡಗಳನ್ನು ಒತ್ತುವರಿದಾರರು ಕಡಿದಿರುವುದಿಲ್ಲ. ಒತ್ತುವರಿ ಮಾಡಿದ ನಂತರ ಒತ್ತುವರಿದಾರರು ಹಾಕಿರುವ ಬೇಲಿಗೆ ಸುಮಾರು 4 ವರ್ಷ ಆಗಿರುತ್ತದೆ. ಒತ್ತುವರಿದಾರರು ಬೇಲಿ ಹಾಕಿರುವ ಬಗ್ಗೆ ನಾನು ಛಾಯಚಿತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಒತ್ತುವರಿ ಮಾಡಿರುವ ಜಮೀನಿನ ಬಗ್ಗೆ ಒತ್ತುವರಿದಾರರ ವಿರುದ್ದ ನಾನು ಸಂಬಂಧಪಟ್ಟ ಪೊಲೀಸರಿಗೆ ದೂರು ನೀಡಿರುವುದಿಲ್ಲ. ನನಗೆ ಯಾವುದೇ ಅನ್ಯಾಯವಾದರೆ ಸಂಬಂಧಪಟ್ಟ ಇಲಾಖೆಗೆ ದೂರು ನೀಡುತ್ತೇನೆ ಎಂದರೆ ಸರಿ. ನಾನು ದಾವೆಯಲ್ಲಿ ಹೇಳಿದಂತೆ ನಾನು ದಾವ ಆಸ್ತಿಯಲ್ಲಿ ಇಲ್ಲದಂತಹ ಸಂದರ್ಭದಲ್ಲಿ ಪ್ರತಿವಾದಿಗಳು ದಾವ ಆಸ್ತಿಯನ್ನು ಒತ್ತವರಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಒತ್ತುವರಿ ಮಾಡದ ಕಾರಣ ನಾನು ಪ್ರತಿವಾದಿಗಳ ವಿರುದ್ದ ಪೊಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 129/3 ಮತ್ತು ಸರ್ವೆ ನಂಬರ್ 129/4 ಆಸ್ತಿಯ ಮಾಲೀಕರು ಒತ್ತುವರಿ ಮಾಡಿರುವ 5 ½ ಗುಂಟೆ ಜಮೀನನ್ನು ನನಗೆ ಯಾವಾಗ ಬಿಟ್ಟುಕೊಟ್ಟಿರುತ್ತಾರೆ ಎಂದು ದಿನಾಂಕ ನೆನಪಿಲ್ಲ. ಸದರಿ 5 ½ ಗುಂಟೆ ಜಮೀನನ್ನು ನನಗೆ ಬಿಟ್ಟುಕೊಟ್ಟ ಬಗ್ಗೆ ನನ್ನ ಮತ್ತು ಎಂ.ಎಂ. ಲಕ್ಷ್ಮಣಗೌಡರ ನಡುವೆ ಯಾವುದೇ ದಾಖಲೆಯಾಗಿರುವುದಿಲ್ಲ. ಎಂ.ಎಂ. ಲಕ್ಷ್ಮಣಗೌಡರು ನನ್ನ ಅಣ್ಣನಾಗಿರುತ್ತಾರೆ. ಎಂ.ಎಂ. ಲಕ್ಷ್ಮಣಗೌಡರ

ಸ್ವಾಧೀನ ಅನುಭವದಲ್ಲಿ ಬೇಲಿ ಮಾಡಿದ ಸರ್ವೆ ನಂಬರ್ 129/3 ಮತ್ತು ಸರ್ವೆ ನಂಬರ್ 129/4 ಆಸ್ತಿಗಳನ್ನು ಬೆಂಗಳೂರಿನ ವಿಷ್ಣುಭಾರ್ಗವ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುತ್ತಾರೆ ಆದರೆ ನನ್ನ ಜಾಗವನ್ನು ಬಿಟ್ಟು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಎಂ.ಎಂ. ಲಕ್ಷ್ಮಣಗೌಡರು ವಿಷ್ಣುಭಾರ್ಗವ್ ರವರಿಗೆ ಮಾರಾಟ ಮಾಡಿದ ಆಸ್ತಿಯ ಕ್ರಯ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಎಂ.ಎಂ. ಲಕ್ಷ್ಮಣಗೌಡರ ಸ್ವಾಧೀನದಲ್ಲಿ ಇದ್ದ ಸರ್ವೆ ನಂಬರ್ 129/3 ಮತ್ತು ಸರ್ವೆ ನಂಬರ್ 129/4 ಆಸ್ತಿಗಳು ಅಕ್ಕ ಪಕ್ಕದಲ್ಲಿ ಇರುತ್ತದೆ. ಸರ್ವೆ ನಂಬರ್ 129/3 ಮತ್ತು ಸರ್ವೆ ನಂಬರ್ 129/4 ರ ಒಟ್ಟು ಚಕ್ಕುಬಂದಿಯನ್ನು ನನಗೆ ಹೇಳಲು ಸಾಧ್ಯವಿಲ್ಲ. ಸರ್ವೆ ನಂಬರ್ 129/9 ರ ಜಮೀನಿನ ಪಶ್ಚಿಮಕ್ಕೆ ನನ್ನದೇ ಸರ್ವೆ ನಂಬರ್ 129/1 ರ ಜಮೀನು ಇರುತ್ತದೆ. ಸರ್ವೆ ನಂಬರ್ 129/9 ರ ಪಶ್ಚಿಮ ದಿಕ್ಕಿಗೆ ನನಗೆ ಸೇರಿದ ಸರ್ವೆ ನಂಬರ್ 129/1 ರ ಆಸ್ತಿಯು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 129/1 ರ ಆಸ್ತಿಯನ್ನು ಪ್ರತಿವಾದಿಯು ಒತ್ತುವರಿ ಮಾಡಿರುವುದಿಲ್ಲ. ಸರ್ವೆ ನಂಬರ್ 129/9 ರ ಆಸ್ತಿಯ ಪಶ್ಚಿಮ ದಿಕ್ಕಿನಿಂದ ಪ್ರತಿವಾದಿಯು ಒತ್ತುವರಿ ಮಾಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 129/9 ರ ಆಸ್ತಿಯ ಪಶ್ಚಿಮ ದಿಕ್ಕಿನ ಭಾಗವನ್ನು ಒತ್ತುವರಿ ಮಾಡಬೇಕಾದರೆ ಸರ್ವೆ ನಂಬರ್ 129/1 ರ ಆಸ್ತಿಯನ್ನು ಒತ್ತುವರಿ ಮಾಡಿದ ನಂತರವೇ ಸದರಿ ಆಸ್ತಿಯನ್ನು ಒತ್ತುವರಿ ಮಾಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ದಿಃ 10.12.2020 ರಂದು ನಾನು ಊರಿನಲ್ಲಿಯೇ ಇದ್ದೆನು. ದಾವ ಎ ಶೆಡ್ಯೂಲ್ ಆಸ್ತಿಯ 50 ಮೀಟರ್ ದೂರದಲ್ಲಿ ನನ್ನ ವಾಸದ ಹಳೆ ಮನೆ ಇರುತ್ತದೆ. ನನ್ನ ಮನೆಯಿಂದ ಪ್ರತಿವಾದಿಯ ಮನೆಯು 1 ½ ಕಿ.ಮೀ ದೂರದಲ್ಲಿ ಇರುತ್ತದೆ. ದಾವ ಎ ಶೆಡ್ಯೂಲ್ ಆಸ್ತಿಯಿಂದಲು 1 ½ ಕಿ.ಮೀ ದೂರದಲ್ಲಿ ಪ್ರತಿವಾದಿಯ

ಮನೆ ಇರುತ್ತದೆ ಎಂದರೆ ಸರಿ. ಎಂ.ಎಂ. ಲಕ್ಷ್ಮಣಗೌರ ಮನೆಯು ದಾವ ಎ ಶೆಡ್ಯೂಲ್ ಆಸ್ತಿಯಿಂದ 500 ಮೀಟರ್ ದೂರದಲ್ಲಿ ಇರುತ್ತದೆ. ನನ್ನ ತಂದೆಯ ಕಾಲದಲ್ಲಿ ವಾಸವಾಗಿದ್ದ ಹಳೆಯ ಮನೆಯನ್ನು ವಿಭಾಗದಲ್ಲಿ ಒಬ್ಬರಿಗೆ ನೀಡಿರುತ್ತಾರೆ. ಉಳಿದ ಪಾಲುದಾರರು ಪ್ರತ್ಯೇಕ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ನನ್ನ ಅಣ್ಣ ತಮ್ಮಂದಿರು ಪ್ರತ್ಯೇಕ ಮನೆ ಮಾಡುವ ಪೂರ್ವದಲ್ಲಿ ನನ್ನ ತಂದೆಯ ಕಾಲದಲ್ಲಿ ವಾಸವಾಗಿದ್ದ ಹಳೆ ಮನೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿ.

8. ಪ್ರತಿವಾದಿಗಳು ದಾವ ಬಿ ಶೆಡ್ಯೂಲ್ ನ್ನು ಒತ್ತುವರಿ ಮಾಡಿದ ನಂತರ ನಾನು ವಕೀಲರ ಮೂಲಕ ಪ್ರವಾದಿಗೆ ನೋಟೀಸು ನೀಡಿರುವುದಿಲ್ಲ ಆದರೆ ನಾನೇ ಪ್ರತಿವಾದಿಗಳ ಬಳಿ ಒತ್ತುವರಿಯ ಬಗ್ಗೆ ಕೇಳಿರುತ್ತೇನೆ. ಯಾವ ದಿನಾಂಕದಂದು ನಾನು ಪ್ರತಿವಾದಿಗಳ ಬಳಿ ಒತ್ತುವರಿಯ ಬಗ್ಗೆ ಆ ರೀತಿ ವಿಚಾರಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ಪ್ರತಿವಾದಿಗಳ ಬಳಿ ಒತ್ತುವರಿ ಬಗ್ಗೆ ವಿಚಾರಿಸಿದಾಗ ಪ್ರತಿವಾದಿಯು ನಾನು ಸರ್ವೆ ಮಾಡಿಸಿದ ನಂತರ ಒತ್ತುವರಿ ಕಂಡು ಬಂದರೆ ಬಿಟ್ಟುಕೊಡುತ್ತೇನೆ ಎಂದು ತಿಳಿಸಿರುತ್ತಾರೆ. ಆ ಬಗ್ಗೆ ನಾನು ಪ್ರತಿವಾದಿಯ ಬಳಿ ಯಾವುದೇ ದಾಖಲಾತಿಯನ್ನು ಮಾಡಿಕೊಂಡಿರುವುದಿಲ್ಲ. ನಾನು ಪ್ರತಿವಾದಿಯ ಬಳಿ ವಿಚಾರಿಸಿದಾಗ ಒತ್ತುವರಿ ಕಂಡು ಬಂದಿದ್ದರೆ ಬಿಟ್ಟುಕೊಡುತ್ತೇನೆ ಎಂದು ಹೇಳಿದ ದಿನಾಂಕವನ್ನು ವ್ಯಾಜ್ಯ ಕಾರಣದಲ್ಲಿ ನಮೂದು ಮಾಡಿರುವುದಿಲ್ಲ. ದಿಃ 10.12.2020 ರಂದು ವ್ಯಾಜ್ಯ ಕಾರಣ ಉಂಟಾಗಿರುತ್ತದೆ ಎಂದು ತೋರಿಸುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿಃ 09.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎಂ.ವಿ.ಜೆ. ವಕೀಲರಿಂದ ಪ್ರತಿವಾದಿ ಪರವಾಗಿ**

9. ದಾವ ಆಸ್ತಿಯಲ್ಲಿ ರಾದಮ್ಮ, ಮಧು, ಮಂಜುನಾಥ, ನಾಗರಾಜ, ನರೇಂದ್ರ, ಎನ್.ಕೆ. ಚಂದ್ರೇಶ ಮತ್ತು ಜಯಕುಮಾರ್ ರವರಿಗೆ ಹೋಗಲು ದಾರಿ ಇರುತ್ತದೆ ಎಂದರೆ ಸರಿ. ಸದರಿ ದಾರಿಯನ್ನು ಅನಾಧಿಕಾಲದಿಂದಲು ಅವರು ಉಪಯೋಗಿಸುತ್ತಿದ್ದರು ಎಂದರೆ ಸರಿ. ಸದರಿ ದಾರಿಯು ಅಂದಾಜು 1 ½ ಯಿಂದ 2 ಗುಂಟೆ ವ್ಯಾಪ್ತಿ ಪದ್ರೇಶದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಓಣಿಯು 5 ಅಡಿ ಅಗಲ ಮತ್ತು 30 ಅಡಿ ಉದ್ದ ಇರುತ್ತದೆ. ನನ್ನ ಆಸ್ತಿಯ ನಂತರ ಸದರಿ ದಾರಿಯು ಪ್ರತಿವಾದಿಯ ಆಸ್ತಿಯ ಮೂಲಕ ಹಾದು ಹೋಗುತ್ತದೆ. ನನ್ನ ಜಮೀನಿನಲ್ಲಿ ಓಣಿ ಇರುವುದಿಲ್ಲ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ವಾಹನ ಓಡಾಡುವಷ್ಟು ಅಗಲ ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರು ಸಹ ಉದ್ದೇಶಪೂರ್ವಕವಾಗಿ ಓಣಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಉತ್ತರ ದಿಕ್ಕಿನಲ್ಲಿ ಸದರಿ ಓಣಿಯು ಇರುತ್ತದೆ. ವಾದ ಪತ್ರದಲ್ಲಿ ದಾವ ಆಸ್ತಿಯ ಉತ್ತರ ದಿಕ್ಕಿನಲ್ಲಿ ಅನಾದಿ ಕಾಲದಿಂದಲು ಸಾರ್ವಜನಿಕರು ಉಪಯೋಗಿಸುವ ಓಣಿ ಇರುತ್ತದೆ ಎಂದು ನಾನು ಬರೆಸಿರುವುದಿಲ್ಲ. ನನಗೆ ಸೇರಿದ ಸರ್ವೆ ನಂಬರ್ 129/1 ರಲ್ಲಿ 22 ಗುಂಟೆ ಜಮೀನನ್ನು ವಿಷ್ಣು ಭಾರ್ಗವ್ ರವರಿಗೆ 2022 ರಲ್ಲಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನಾನು ಮಾರಾಟ ಮಾಡಿರುವ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿಯೇ ಎಂ.ಎಂ. ಲಕ್ಷ್ಮಣಗೌಡರು ವಿಷ್ಣು ಭಾರ್ಗವ್ ರವರಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ನಾನು ಮಾರಾಟ ಮಾಡಿರುವ ಜಮೀನು ಮತ್ತು ಎಂ.ಎಂ.

ಲಕ್ಷ್ಮಣಗೌಡರು ಮಾರಾಟ ಮಾಡಿರುವ ಜಮೀನು ಒಂದಕ್ಕೊಂದು ತಾಗಿಕೊಂಡು ಇರುತ್ತದೆ ಆದರೆ ಮಧ್ಯದಲ್ಲಿ ಬೇಲಿ ಇರುತ್ತದೆ. ನಾನು ಮತ್ತು ಎಂ.ಎಂ. ಲಕ್ಷ್ಮಣಗೌಡರು ವಿಷ್ಣು ಭಾರ್ಗವ್ ರವರಿಗೆ ಮಾರಾಟ ಮಾಡಿದ ಜಮೀನಿನ ಸುತ್ತ ವಿಷ್ಣು ಭಾರ್ಗವ್ ರವರು ಬೇಲಿ ಮಾಡಿಕೊಂಡು ಸ್ವಾಧೀನ ಇರುತ್ತಾರೆ ಎಂದರೆ ಸರಿ. ಒಂದು ವೇಳೆ ಎಂ.ಎಂ. ಲಕ್ಷ್ಮಣಗೌಡರು 5 ½ ಗುಂಟೆ ಆಸ್ತಿಯನ್ನು ನನಗೆ ಬಿಟ್ಟುಕೊಟ್ಟಿದರೆ ಸದರಿ ಆದೇಶದ ವಿರುದ್ದ ಚಿಕ್ಕಮಗಳೂರು ಡಿ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ಎಂ.ಎಂ. ಲಕ್ಷ್ಮಣಗೌಡರು ಅರ್ಜಿ ಸಲ್ಲಿಸುವ ಪ್ರಮೇಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಎಂ.ಎಂ. ಲಕ್ಷ್ಮಣಗೌಡರು 5 ½ ಗುಂಟೆ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಿದ್ದರೆ ಸದರಿ ವಿಚಾರವನ್ನು ನಾನು ಚಿಕ್ಕಮಗಳೂರು ಡಿ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ನಾನು ಲಿಖಿತವಾಗಿ ತಿಳಿಸುತ್ತಿದ್ದೆನು ಎಂದರೆ ಸಾಕ್ಷಿಯು ಎಂ.ಎಂ. ಲಕ್ಷ್ಮಣಗೌಡರು ಸದರಿ ಪ್ರಕರಣದ ನಂತರ ಸದರಿ 5 ½ ಗುಂಟೆ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಡಿ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ಪ್ರಕರಣವು ಇಂದಿಗೂ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ. ಡಿ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ಎಂ.ಎಂ. ಲಕ್ಷ್ಮಣಗೌಡರು ಅರ್ಜಿ ಸಲ್ಲಿಸಿರುವುದರಿಂದ ನಾನು ಅವರನ್ನು ಕೈಬಿಟ್ಟು ಈ ಪ್ರಕರಣದಲ್ಲಿ ಪ್ರತಿವಾದಿಯ ವಿರುದ್ದ ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಿವಿಲ್ ನ್ಯಾಯಾಲಯದಲ್ಲಿ ಆದೇಶವನ್ನು ಪಡೆದು ಡಿ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ಸದರಿ ಆದೇಶವನ್ನು ಹಾಜರು ಮಾಡುವ ದುರುದ್ದೇಶವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಎಂ.ಎಂ. ಲಕ್ಷ್ಮಣಗೌಡರು ಬಿಟ್ಟುಕೊಟ್ಟಿರುವ 5 ½ ಗುಂಟೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 129/9 ರಲ್ಲಿ ಸುಮಾರು 30 ವರ್ಷದ ಸಿಲ್ವರ್ ಮರಗಳು ಮತ್ತು ಕಾಫಿ ಗಿಡಗಳು ಇರುತ್ತವೆ. ನನ್ನ ಅಜ್ಜನ ಕಾಲದಿಂದ ಒಟ್ಟು

ಕುಟುಂಬದ ಆಸ್ತಿಯನ್ನು ಇಂದಿನವರೆಗೆ ಸರ್ವೆ ದಾಖಲಾತಿ ಮೂಲಕ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ಮಾಡಿಸಿದ ಬಗ್ಗೆ ಪ್ರತಿವಾದಿಗೆ ನೊಂದಾಯಿತ ನೋಟೀಸು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಸರ್ವೆ ಮಾಡಿರುತ್ತಿದ್ದರೆ ಬಾಜುದಾರರಾದ ಪ್ರತಿವಾದಿಗೆ ಸರ್ವೆ ಇಲಾಖೆಯಿಂದ ನೋಟೀಸು ನೀಡುತ್ತಿದ್ದರು ಎಂದರೆ ಸಾಕ್ಷಿಯು ನೋಟೀಸು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

10. ನಿ.ಪಿ.11 ದಾಖಲೆಯಲ್ಲಿ ಪ್ರತಿವಾದಿ ಮತ್ತು ಎಂ.ಎಂ. ಲಕ್ಷ್ಮಣಗೌಡರು ನನಗೆ ಸೇರಿದ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.11 ದಾಖಲೆಯನ್ನು ನಾನು ಪ್ರತಿವಾದಿಯ ವಿರುದ್ದ ದಾವೆ ಹೂಡಲು ಸರ್ವೆ ಇಲಾಖೆಯವರೊಂದಿಗೆ ಶಾಮೀಲ್ ಆಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.11 ದಾಖಲಾತಿಯನ್ನು ನಾನು ಡಿ.ಡಿ.ಎಲ್.ಆರ್ ರವರ ಮುಂದೆ ಇರುವ ಪ್ರಕರಣದಲ್ಲಿ ಹಾಜರು ಮಾಡಿರುವುದಿಲ್ಲ. ನಿ.ಪಿ.11 ದಾಖಲೆಯನ್ನು ನಾನು ಡಿ.ಡಿ.ಎಲ್.ಆರ್ ಕಚೇರಿಯಲ್ಲಿ ಹಾಜರು ಮಾಡಿದರೆ ಸೃಷ್ಟಿ ಮಾಡಿರುವ ವಿಚಾರ ಬೆಳಕಿಗೆ ಬರುತ್ತದೆ ಎನ್ನುವ ಉದ್ದೇಶದಿಂದ ಡಿ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣದಲ್ಲಿ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ದಾಖಲಾತಿಯನ್ನು ಯಾವ ದಿನಾಂಕ ತಯಾರು ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ, ನಾನು ಮತ್ತು ಎಂ.ಎಂ. ಲಕ್ಷ್ಮಣಗೌಡರು ಅನೋನ್ಯವಾಗಿರುತ್ತೇವೆ. ನಾನು ಮತ್ತು ವಿಷ್ಣು ಬಾರ್ಗವ್ ರವರು ಅನೋನ್ಯವಾಗಿರುತ್ತೇವೆ. ಪ್ರತಿವಾದಿಗೆ ಮತ್ತು ಎಂ.ಎಂ. ಲಕ್ಷ್ಮಣಗೌಡರ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಎಂ.ಎಂ. ಲಕ್ಷ್ಮಣಗೌಡರ ಚಿತಾವಣೆಯಿಂದ ನಾನು ಪ್ರತಿವಾದಿಯ ವಿರುದ್ದ ಈ

ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯನ್ನು ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಿ ಅಳತೆ ಮಾಡುವುದಕ್ಕೆ ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ಪಕ್ಕಾ ಪೋಡಿ ಮಾಡುವ ಪೂರ್ವದಲ್ಲಿ ಆಸ್ತಿಯನ್ನು ಸರ್ವೆ ಮಾಡಿ ಸರ್ವೆ ಸಮಯದಲ್ಲಿ ಮಹಜರ್ ಮಾಡಿ ಮಹಜರ್ ಗೆ ಆಜುಬಾಜುದಾರರ ಸಹಿಯನ್ನು ಪಡೆಯುತ್ತಾರೆ ಎಂದರೆ ಸರಿ. ನಿ.ಪಿ.10 ರಲ್ಲಿ ಪ್ರತಿವಾದಿಯ ಸಹಿ ಇರುವುದಿಲ್ಲ ಎಂದರೆ ಸರಿ. ನಿ.ಪಿ.12 ರಲ್ಲಿ ಪ್ರತಿವಾದಿಗೆ ನೋಟೀಸು ತಲುಪಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.10 ಮತ್ತು 12 ದಾಖಲಾತಿಯನ್ನು ನಾನು ಸರ್ವೆ ಇಲಾಖೆಯೊಂದಿಗೆ ಶಾಮೀಲ್ ಆಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯನ್ನು ಪ್ರತಿವಾದಿಯು ಒತ್ತುವರಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯು ನನ್ನ ಅಜ್ಜನ ಕಾಲದಿಂದ ನಮ್ಮ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಅಜ್ಜ ಮತ್ತು ಪ್ರತಿವಾದಿಯ ತಂದೆ ಯಾವ ಆಸ್ತಿಯನ್ನು ಪ್ರತಿವಾದಿಗೆ ಸ್ವಾಧೀನ ಕೊಟ್ಟಿರುತ್ತಾರೋ ಸದರಿ ಆಸ್ತಿಯನ್ನು ಪ್ರತಿವಾದಿಯು ಇಂದಿಗೂ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯನ್ನು 50 ವರ್ಷಗಳಿಂದ ಪ್ರತಿವಾದಿಯು ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯನ್ನು ಪ್ರತಿವಾದಿಯು ಸ್ವಾಧೀನ ಇರುವ ವಿಚಾರವು ನನಗೆ ಮತ್ತು ಎಂ.ಎಂ. ಲಕ್ಷ್ಮಣಗೌಡರಿಗೆ 50 ವರ್ಷಗಳಿಂದ ತಿಳಿದಿತ್ತು ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ಎಂ.ಎಂ. ಲಕ್ಷ್ಮಣಗೌಡರೇ ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ

ಒಟ್ಟು ಕುಟುಂಬದ ಆಸ್ತಿಯು ಮಾಲೀಕತ್ವ ಒಬ್ಬರ ಬಳಿ ಮತ್ತು ಸ್ವಾಧೀನ ಇನ್ನೊಬ್ಬರ ಬಳಿ ಇದ್ದ ಬಗ್ಗೆ ನಮ್ಮ ಕುಟುಂಬದಲ್ಲಿ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಂಚಾಯಿತಿಯ ಬಗ್ಗೆ ಪತ್ರ ಮುಖೇನ ಬರವಣಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ನನ್ನ ಮತ್ತು ಪ್ರತಿವಾದಿಯ ಎಲ್ಲಾ ಸದಸ್ಯ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

11. ಎಂ.ಎಂ. ಲಕ್ಷ್ಮಣಗೌಡರಿಗೆ ಎಂ.ಬಿ. ಪುಟ್ಟೇಗೌಡರ ಎನ್ನುವ ಚಿಕ್ಕಪ್ಪ ಇದ್ದರು ಎಂದರೆ ಸರಿ. ಸದರಿ ಪಂಚಾಯಿತಿ ಪತ್ರವು ಪುಟ್ಟೇಗೌಡರ ಬಳಿ ಇತ್ತು ಎಂದರೆ ಸರಿಯಲ್ಲ. ಸದರಿ ಪತ್ರವು ಎಂ.ಎಂ. ಲಕ್ಷ್ಮಣಗೌಡರ ಸ್ವಾಧೀನ ಇಂದಿಗೂ ಇರುತ್ತದೆ ಎಂದರೆ ಸರಿಯಲ್ಲ. ಇದರ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ದಾಖಲೆಗಳನ್ನು ಪ್ರತಿವಾದಿ ಸ್ವಾಧೀನ ಇರುವ ಜಮೀನನ್ನು ಕಬಳಿಸುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ